ರಾಜ್ಯದಲ್ಲಿರುವ ನವೋದಯ ಶಾಲೆಗಳ ಸಂಖ್ಯೆ

622 - ಶ್ರೀಮತಿ ದಮಯಂತಿ ಬೋರೆಗೌಡ (ಶ್ರೀರಂಗಪಟ್ಟಣ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾರಂಭಿಸಲಾಗಿರುವ ನವೋದಯ ವಸತಿ ಶಾಲೆಗಳ ಸಂಖ್ಯೆ ಎಷ್ಟು?

ಆ) ಖಾಯಂ ಸಿಬ್ಬಂದಿಯ ಸಂಖ್ಯೆ ಎಷ್ಟು?

ಇ) ಕೇಂದ್ರ ವಸತಿ ಶಾಲೆಯಲ್ಲಿ ಒಬ್ಬ ವಿದ್ಯಾರ್ಥಿಗೆ ನೀಡಲಾಗುತ್ತಿರುವ ಆಹಾರ ವೆಚ್ಚ ಎಷ್ಟು?

ಈ) ರಾಜ್ಯ ವಸತಿ ಶಾಲೆಯಲ್ಲಿ ಒಬ್ಬ ವಿದ್ಯಾರ್ಥಿಗೆ ನೀಡಲಾಗುತ್ತಿರುವ ಆಹಾರ ವೆಚ್ಚವೆಷ್ಟು?

ಉ) ರಾಜ್ಯ ಸರ್ಕಾರವು ಆಹಾರ ವೆಚ್ಚಕ್ಕೆ ನೀಡುತ್ತಿರುವ ಅನುದಾನವು ಕೇಂದ್ರ ಸರ್ಕಾರವು ನೀಡುತ್ತಿರುವ ಆಹಾರ ವೆಚ್ಚದ ಅನುದಾನಕ್ಕೆ ಸಮಗೊಳಿಸಲಾಗುವುದೇ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :

ಅ) ನಾಲ್ಕು

ಆ) ವಸತಿ ಶಾಲೆ - 21
ವಸತಿ ನಿಲಯ - 12
ಒಟ್ಟು **33**

ಇ) ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ 350.00

ಈ) ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ. 200.00

ಉ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ

ಸಿಂಧನೂರಿನ ಕುಡಿಯುವ ನೀರಿನ ಯೋಜನೆಯ ಪ್ರಗತಿ

524 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಿಂಧನೂರಿನ ಕುಡಿಯುವ ನೀರಿನ ಯೋಜನೆ ಯಾವ ಹಂತದಲ್ಲಿದೆ?

ಆ) ಆ ಯೋಜನೆಗೆ ಇಲ್ಲಿಯವರೆಗೆ ವಿಚ್ರ್ಚಾದ ಹಣ ಎಷ್ಟು ಹಾಗೂ ಆ ಯೋಜನೆಯನ್ನು ಸರ್ಕಾರದವರು ಯಾವಾಗ ಪೂರ್ಣಗೊಳಿಸುವರು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಈ ಕೆಲಸವು ಪ್ರಗತಿಯಲ್ಲಿದೆ.

ಬೌದ್ಧಿಕ ಪ್ರಗತಿಯು ಈ ಕೆಳಕಂಡಂತಿದೆ.

1) ಶೇಖರಣಾ ಜಲಾಯನ ನಿರ್ಮಾಣ ಏರಿ ಕೆಲಸಗಳು ಪೂರೈಸುವ ಹಂತದಲ್ಲಿದೆ.

2) 500 ಮಿ.ಮಿ. ವ್ಯಾಸದ ಹಾಗೂ 16.8 ಕಿ.ಮೀ ಪಿ.ಎಸ್.ಸಿ. ಗುರುತ್ವಾಕರ್ಷಕ ಕೊಳವೆ ಮಾರ್ಗ ಈ ಕೆಲಸಕ್ಕಾಗಿ ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಈವರೆವಿಗೂ 250 ಕೊಳವೆಗಳನ್ನು ಪಡೆಯಲಾಗಿದೆ.

3) 3 ಲಕ್ಷ ಗ್ಯಾಲನ್ ಸಾಮರ್ಥ್ಯದ ಜಲಸಂಗ್ರಹಗಾರ ತಳಪಾಯದ ಕೆಲಸವು ಪ್ರಗತಿಯಲ್ಲಿದೆ.

4) 50,000 ಗ್ಯಾಲನ್ ಸಾಮರ್ಥ್ಯದ ಬ್ರೇಕ್ ಪ್ರೆಷರ್ ಜಲಸಂಗ್ರಹಾಗಾರ ಈ ಕೆಲಸಕ್ಕೆ ಗುತ್ತಿಗೆದಾರರನ್ನು ನೇಮಿಸಲಾಗಿದ್ದು ಮಾರ್ಪಾಡು ಪ್ರಸ್ತಾವನೆಯ ಅನ್ವಯ ಇದನ್ನು ಕೈ ಬಿಡಲಾಗಿದೆ.

5) 1.20 ಎಂ.ಜಿ.ಡಿ ಸಾಮರ್ಥ್ಯದ ಜಲಶುದ್ಧೀಕರಣ ಘಟಕ
ಈ ಕೆಲಸಕ್ಕೆ ಟೆಂಡರ್ ಪಡೆಯಲಾಗಿದೆ. ಗುತ್ತಿಗೆದಾರರನ್ನು ನೇಮಿಸಬೇಕಾಗಿದೆ.

6) ಮೂಲಸ್ಥಾವರದ ಕೆಲಸಗಳನ್ನು ಪ್ರಾರಂಭಿಸಬೇಕಾಗಿದೆ.

7) ವಿತರಣಾ ಕೊಳವೆ ಮಾರ್ಗಗಳು ಕೆಲಸವು ಪ್ರಗತಿಯಲ್ಲಿದೆ. (ಶೇ. 75 ವಿತರಣಾ ಕೊಳವೆ ಮಾರ್ಗಗಳು ಪೂರ್ತಿಯಾಗಿರುತ್ತದೆ)

ಆ) 1993ರ ಜುಲೈ ಕೊನೆಗೆ 291.34 ಲಕ್ಷ ರೂ.ಗಳು ಖರ್ಚಾಗಿರುವುದು. ಈ ಯೋಜನೆಯನ್ನು ಆಗಸ್ಟ್ 94ರ ವೇಳೆಗೆ ಪೂರೈಸಲು ನಿಯೋಜಿಸಲಾಗಿದೆ.

ಬೆಂಗಳೂರು ನಗರದಲ್ಲಿ ಹಿಂದುಳಿದ ವರ್ಗಗಳ ಹಾಗೂ ಹರಿಜನ ವಿದ್ಯಾರ್ಥಿನಿಲಯಗಳ ಸಂಖ್ಯೆ

526 - ಶ್ರೀ ಹಂಪನಗೌಡ (ಸಿಂಧನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳೆಷ್ಟು? ಮತ್ತು ಹರಿಜನ ವಿದ್ಯಾರ್ಥಿಗಳಿಗಿರುವ ವಸತಿ ನಿಲಯಗಳೆಷ್ಟು?

ಆ) ಅವುಗಳಲ್ಲಿ, ಸ್ವಂತ ಕಟ್ಟಡವಿರುವ ವಿದ್ಯಾರ್ಥಿನಿಲಯಗಳೆಷ್ಟು? ಹಾಗೂ ಬಾಡಿಗೆ ರೂಪದಲ್ಲಿರುವ ವಿದ್ಯಾರ್ಥಿನಿಲಯಗಳೆಷ್ಟು?

ಇ) ಪ್ರತಿ ತಿಂಗಳು ಪ್ರತಿ ವಿದ್ಯಾರ್ಥಿನಿಲಯಗಳಿಗೆ ಬಾಡಿಗೆಗೆ ಖರ್ಚು ಮಾಡುವ ಹಣವೆಷ್ಟು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :

ಅ) ಹಿಂದುಳಿದ ವರ್ಗಗಳ ಇಲಾಖೆಯವತಿಯಿಂದ 7 ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆಯವತಿಯಿಂದ 24 ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ.

ಆ)

	ಸ್ವಂತ ಕಟ್ಟಡದಲ್ಲಿರುವ ವಿದ್ಯಾರ್ಥಿನಿಲಯಗಳು	ಬಾಡಿಗೆ ಕಟ್ಟಡದಲ್ಲಿರುವ ವಿದ್ಯಾರ್ಥಿನಿಲಯಗಳು
ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆ :	-	7
ಸಮಾಜ ಕಲ್ಯಾಣ ಇಲಾಖೆ :	18	6

ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.